ಆಕೆ ಗಂಡನ ದುಡಿಮೇಲಿ ಅಚ್ಚುಕಟ್ಟಾಗಿ ಸಂಸಾರ ಮಾಡ್ತಿಲ್ವಾ? ಅವಳೂ ದುಡಿಯೋಕೆ ಹೊರಟ್ರೆ ಮನೆ ಕತೆ ಏನು? ಮಕ್ಳಿನ್ನೂ ಸಣ್ಣವರು. ಅತ್ತೆ ಮಾವನೂ ಜೊತೆಗೆ ಇದ್ದಾರೆ. ಅವರೂ ಇವಳು ಹೊರಹೋಗಿ ದುಡಿಯೋದನ್ನ ಒಪ್ಕೋಬೇಕಲ್ವಾ? ಸುಮ್ನೆ ಇಲ್ಲದ ರಗಳೆ ಮಾಡದೆ ಮನಸ್ಸಿಗೆ ಸಮಾಧಾನ ತಂದ್ಕೊಳ್ಳಿ' ಎಂದು ಕಂಡೂ ಕಾಣದ ಹಾಗೆ, ಹೇಳಿಯೂ ಹೇಳದ ಹಾಗೆ ಬುದ್ಧಿಮಾತು ಹೇಳಿದ್ರೂ ಕೇಳದೆ, 'ಆಯ್ತು. ಸರಿ ಬಿಡಮ್ಮಾ, ನಿನ್ನ ಮನಸ್ಸಿನ ಸಮಾಧಾನಕ್ಕಾದ್ರೂ ಯಾವ್ದಾದ್ರೂ ಕೆಲಸ ಹುಡ್ಕೊಂಡು ಮಾಡ್ತೀನಿ' ಅಂತ ಅದಿತಿ ಅನ್ನೋವರೆಗೂ ಬಿಡದೆ ನಿಂತಲ್ಲಿ ಕುಂತಲ್ಲಿ ಕಾಡಿ ಒಪ್ಪಿಸಿಯೇ ಬಿಟ್ಟಳು.

ಆದ್ರೆ ಕೆಲಸದ ಬೇಟೆ ಶುರುವಾದಾಗಲೇ ಅದಿತಿಗೆ ವಿದ್ಯೆಯ ಮಹತ್ವ ತಿಳಿದದ್ದು. 'ಮಿನಿಮಮ್ ಡಿಗ್ರಿನೂ ಓದಿಲ್ವಾ?' ಎಂದು ಬರುತ್ತಿದ್ದ ವ್ಯಂಗ್ಯದ ಉದ್ಗಾರಗಳನ್ನು ಮೊದಮೊದ್ಲು ಕಡೆಗಣಿಸಿದ್ರೂ,



ಹೋಗೀ ಬಂದೂ ಎದುರಾಗುತ್ತಿದ್ದ ಅದೊಂದೇ ಪ್ರಶ್ನೆಯನ್ನು ಎದುರಿಸಲಾಗದೆ, 'ಯಾವುದಕ್ಕೂ ಒಂದು ಡಿಗ್ರಿಯನ್ನಾದ್ರೂ ಮಾಡ್ಕೋಂತಾ ಅಮ್ಮ ಸಾವಿರ ಸಲ ಹೇಳಿದ್ರೂ ಕೇಳದೆ ದೊಡ್ಡ ತಪ್ಪು ಮಾಡ್ಕೊಂಡೆ' ಎಂದವಳಿಗೆ ಅನ್ನಿಸತೊಡಗಿದ್ದು ಸುಳ್ಳಲ್ಲ. ಇದರೊಟ್ಟಿಗೆ ಮನೇಲಿ ಓದಿಕೊಳ್ಳುವಾಗ ಮಕ್ಳಿಗೆ ಬರುತ್ತಿದ್ದ ಡೌಟುಗಳಿಗೆ ಪಾಠ ಓದಿ ಅರ್ಥಮಾಡಿಸಲೂ ಆಗದ ಅಸಹಾಯಕತೆ, ಒಂದು ಬ್ಲೌಸ್ ಪೀಸ್ಗೂ ಗಂಡನ ಹಣಕ್ಕಾಗಿ ಕಾಯಬೇಕಾದ ಪರಿಸ್ಥಿತಿ ಇವೆಲ್ಲಾ ಆಗೀಗ ಬೇಸರ ತರುತ್ತಿದ್ರೂ ಹೆಚ್ಚು ನೋವಾದದ್ದು ಅವಳ ಮನೆಯ ಪಕ್ಕದಲ್ಲಿ ಖಾಲಿಯಿದ್ದ ಮನೆಯನ್ನು ಕೊಂಡು ವಾಸಕ್ಕೆ ಬಂದ ಅವಳದ್ದೇ ವಯಸ್ಸಿನ ಕವಿತಾಳ ಸಂಸಾರ ನೋಡಿ.

ಕವಿತಾ ಸಂಸಾರ ಅದಿತಿ ಸಂಸಾರಕ್ಕಿಂತ ಬೇರೆಯಾಗೇನೂ ಇರಲಿಲ್ಲ. ಆಕೆಯ ಮನೆಯಲ್ಲೂ ಗಂಡ–ಮಕ್ಕಳು, ಅತ್ತೆ–ಮಾವ. ಒಂದೇ ಒಂದು ವ್ಯತ್ಯಾಸ ಎಂದರೆ, ಹೊರಗೆ ದುಡಿಯುವ ಕವಿತಾಳ ಆತ್ಮವಿಶ್ವಾಸ ಅದಿತಿಯಲ್ಲಿಲ್ಲದ್ದು. ಕಾಲೇಜೊಂದರಲ್ಲಿ ಕೆಲಸ ಮಾಡ್ತಿದ್ದ ಕವಿತಾ ಎಷ್ಟು ಸ್ವಾವಲಂಬಿಯಾಗಿ ಸುಖಿಯಾಗಿ ಕಾಣುತ್ತಿದ್ದಳೋ ಅದರ ಹತ್ತರಷ್ಟು ಆನಂದ ಅವಳು ಅವಳದ್ದೇ ತಾರಸಿ ತೋಟದಲ್ಲಿ ಅಡ್ಡಾಡುವಾಗ ಕಾಣುತ್ತಿತ್ತು. ಮನೆಗೆ ಬೇಕಾದ ಹೂ ತರಕಾರಿಗಳನ್ನು ಒದಗಿಸುತ್ತಿದ್ದ ಕವಿತಾಳ ತಾರಸಿ ತೋಟ ಆಕೆಯ ಅತ್ತೆ ಮಾವನವರ ಸಂಜೆಯ ವಾಕಿಂಗ್‌ಗೆ, ಮಕ್ಕಳ ಕೈದೋಟದ ಚಟುವಟಿಕೆಗಳಿಗೆ ಒದಗಿಬರುತ್ತಿದ್ದುದನ್ನು ಕಂಡ ಅದಿತಿಗೆ, ಒಂದು ತಾರಸಿ ತೋಟ ಇಷ್ಟೆಲ್ಲಾ ಬಹೂಪಯೋಗಿ ಆಗಬಲ್ಲುದೇ ಎಂದು ದೊಡ್ಡ ಅಚ್ಚರಿ ತರುತ್ತಿತ್ತು. ತನ್ನ ಮನೆಯ ತಾರಸಿ ವಿಶಾಲವಾಗಿದ್ದರೂ ಕೇವಲ ಹಪ್ಪಳ ಸಂಡಿಗೆ, ಮೆಣಸಿನಕಾಯಿ, ದನಿಯಾ, ಹಸಿಬಟ್ಟೆಗಳನ್ನು ಮಾತ್ರ ಒಣಗಿ ಹಾಕಲು ಬಳಕೆಯಾಗುತಿದ್ದದ್ದು ಅದಿತಿಗೆ ಬೇಸರ ತಂದಿತು. ಆದರೆ, ಆಸೆಪಟ್ಟ ಮಾತ್ರಕ್ಕೇ ತೋಟ ಮಾಡಿಕೊಳ್ಳುವುದು ಸಾಧ್ಯವೇ? ಹಣ ಎಲ್ಲಿಂದ ತರುವುದು? ಹಣ ಬೇಕೆಂದರೆ ಕೆಲಸ ಮಾಡಬೇಕು. ತಾನು ದುಡಿಯಬೇಕು.

ಅದಿತಿ ಹೇಗಾದರೂ ದುಡಿಮೆಯ ಮಾರ್ಗ ಹುಡುಕಲು ನಿರ್ಧರಿಸಿದಳು. ತವರು ಮನೆಯ ಹಿತ್ತಲಲ್ಲಿ ತರೇವಾರಿ ಹೂ ತರಕಾರಿ ಬೆಳೆದಿದ್ದ ಅದಿತಿಗೆ, ಒಂದು ತುಳಸಿ, ಕರಿಬೇವಿನ ಗಿಡ ಹಾಕಿಕೊಳ್ಳಲೂ ಆಗದ ಗಂಡನ ಮನೆ, ಮದುವೆಯಾದ ಹೊಸತರಲ್ಲಿ ತಂದ ನಿರಾಸೆ ಅಷ್ಟಿಷ್ಟಲ್ಲ ಆದರೀಗ, ಕವಿತಾಳ ತಾರಸಿತೋಟ ನೋಡುತ್ತಾ ನೋಡುತ್ತಾ ಹೊಸ ಆಸೆಯನ್ನು ಚಿಗುರಿಸಿತು. ತನ್ನದೇ ತಾರಸಿತೋಟ ಮಾಡಿಕೊಳ್ಳಲಾದರೂ ಕೆಲಸ ಹುಡುಕಿಕೊಳ್ಳಬೇಕೆಂಬ ಹುಕಿಯನ್ನು ಅದಿತಿಯಲ್ಲಿ, ಕವಿತಾಳ ನಳನಳಿಸುವ ತಾರಸಿ ತೋಟ ಹುಟ್ಟಿಸಿತು.

ಅದೊಂದು ದಿನ ಕವಿತಾ ಮನೆಮಂದಿಯಲ್ಲದ ಒಂದಷ್ಟು ಜನ ಅವರ ತಾರಸಿತೋಟದಲ್ಲಿ ಅಡ್ಡಾಡುವುದನ್ನು ಕಂಡ ಅದಿತಿ, ಕುತೂಹಲದಿಂದ 'ನೀವೆಲ್ಲಾ ಯಾರೆಂದು?' ವಿಚಾರಿಸಿದ್ಲು. ಅವರು ತಾರಸಿತೋಟದ ಮೇಲುಸ್ತುವಾರಿ ಮಾಡುವ ಮಂದಿಯೆಂದು ತಿಳಿದ ಮೇಲೆ, ಆಸಕ್ತಿಯಿಂದ ತಾರಸಿತೋಟದ ಕುರಿತು ಪ್ರಶ್ನೆ ಕೇಳತೊಡಗಿದಳು.

ಅದಿತಿಯ ಕುತೂಹಲ, ಅತ್ಯಾಸಕ್ತಿ ಗಮನಿಸಿದ ಅವರಲ್ಲೊಬ್ರು, 'ಮೇಡಂ, ಟೆರೇಸ್ ಗಾರ್ಡನಿಂಗ್, ಅಂದ್ರೆ ತಾರಸಿ ತೋಟ ನೀವೂ ಮಾಡ್ಬಹುದು. ನಿಮ್ಮನೆ ತಾರಸಿ ನೋಡಿ, ಎಷ್ಟು ವಿಶಾಲವಾಗಿದೆ. ನಾಲ್ಕು ಮನೆಗೆ ಆಗುವಷ್ಟು ಹೂ ತರಕಾರೀನ ನೀವೇ ಬೆಳೆದುಕೊಳ್ಳಬಹುದು' ಎಂದಾಗ, 'ಅಯ್ಯೋ ಅದ್ಕೆ ತುಂಬಾ ಹಣ ಬೇಕೇನೋ!' ಎಂದು ಬೇಸರದ ದನಿಯಲ್ಲಿ ಅದಿತಿ ಹೇಳಿದಾಗ, 'ಅಯ್ಯೋ ಅಷ್ಟೊಂದೇನು ಖರ್ಚಾಗಲ್ಲ... ಒನ್ ಟೈಂ ಇನ್ವೆಸ್ಟ್‌ಮೆಂಟ್ ಅಷ್ಟೇ ಮೇಡಂ ಆಮೇಲೆ ಮನೇಲಿ ನೀವೇ ತರಕಾರಿ ಹೂಹಣ್ಣುಗಳ ವೇಸ್ಟ್‌ನಿಂದ ಕಾಂಪೋಸ್ಟ್ ಗೊಬ್ರ ಮಾಡಿ ಮೇಂಟೇನ್ ಮಾಡ್ಕೋಬಹುದು' ಎಂದಾಗ ಅದಿತಿ ಕಣ್ಣರಳಿಸಿಕೊಂಡು ಆಸಕ್ತಿಯಿಂದ ಮತ್ತಷ್ಟು ಮಾಹಿತಿ ಕೇಳಿದ್ಲು.

ಈಗೀಗ ತಾರಸೀ ತೋಟಗಳು ನಗರ ಮಂದಿಯ ಮೆಚ್ಚಿನ ಹವ್ಯಾಸವೂ, ಬದುಕಿನ ಭಾಗವೂ ಆಗುತ್ತಿರೋದನ್ನು ಅವರೊಡನೆ ನಡೆಸಿದ ಸಂಭಾಷಣೆಯಿಂದ ಅರಿತ ಅದಿತಿಗೆ, ಅದರೊಳಗೆ ಉದ್ಯೋಗಾವಕಾಶದ ಬೆಳ್ಳಿಗೆರೆ ಕಂಡಿತು. ಮೆಲ್ಲಗೆ, ದನಿ ಸರಿಮಾಡಿಕೊಂಡು ಕೇಳಿದ್ಲು, 'ಸರ್, ತಾರಸಿತೋಟ ಮಾಡೋದರ ಬಗ್ಗೆ ಯಾರಾದ್ರೂ ಕಲಿಯಬಹುದಾ? ಅದ್ಕೆ ಏನಾದ್ರು ಡಿಗ್ರಿಗಿಗ್ರಿ ಓದ್ಕಂಡಿರ್ಬೇಕಾ?' ಎಂದಾಗ, 'ಅಯ್ಯೋ ನೀವೇನ್ ಮೇಡಂ! ದೇಶಕ್ಕೇ ಊಟ ಹಾಕೋ ರೈತರು, ಯಾವ ಡಿಗ್ರಿ ಮಾಡ್ಕೊಂಡಿರ್ತಾರೆ? ಓದಿ ದೊಡ್ಡ ದೊಡ್ಡ ಹುದ್ದೇಲಿರೋರು ತಿನ್ನೋದು ನಮ್ಮ ರೈತರು ಬೆಳೆದದ್ದೇ ಅನ್ನ ಅಲ್ವಾ? ಅಲ್ಲದೇ ದೊಡ್ಡದೊಡ್ಡ ಜನರೆಲ್ಲಾ ಚೆನ್ನಾಗಿ ತೋಟ ಮಾಡಿಕೊಡುವವರಿಗೆ ಈಗ ತಾರಸಿ ತೋಟದ ಗುತ್ತಿಗೆ ಕೊಡ್ತಾರೆ. ಈ ಕೆಲಸಕ್ಕೆ ತುಂಬಾ ಡಿಮ್ಯಾಂಡ್ ಇದೆ' ಎಂದಾಗ, ಅದಿತಿಯ ಬಣ್ಣರಹಿತ ತಾರಸಿತೋಟದ ಚಿತ್ರಕ್ಕೆ ವಿವಿಧ ರಂಗು ತುಂಬಿಕೊಂಡಿತು.

ಈಗ ಅದಿತಿ ಸಂತೃಪ್ತ ಸ್ವಾವಲಂಬಿ ಗೃಹಿಣಿಯಾಗಿದ್ದಾಳೆ. ಅದ್ಸರಿ, ಅದಿತಿ ಬಗ್ಗೆ ಇಷ್ಟೆಲ್ಲಾ ಹೇಳ್ತಿದ್ದೀನಲ್ಲಾ ನಾನು ಯಾರಿರಬಹುದು ಅಂದ್ಕೊಂಡ್ರಾ?! ನಾನೇರೀ ಈ ಹಿಂದೆ ಅದಿತಿಯ ಆಪ್ತ ಸಮಾಲೋಚಕಿಯಾಗಿದ್ದ, ಈಗ ಅದಿತಿಯ ಆಪ್ತಸಖಿಯಾಗಿರುವ 'ಅದಿತಿ ತಾರಸಿ ತೋಟ' ಎಂಬ ಸಣ್ಣ ಕಂಪನಿಯ ಜಾಯಿಂಟ್ ಪಾರ್ಟನರ್. ಇನ್ನೂ ಸ್ಪಷ್ಟವಾಗಿ ಹೇಳ್ಬೇಕಂದ್ರೆ, ಕವಿತಾಳ ಅತ್ತೆ!

ಪ್ರತಿಕ್ರಿಯಿಸಿ: feedback@sudha.co.in